# ನಿಮ್ಮೊಡನೆ

## ಭ್ರಷ್ಟಾಚಾರದ ಬ್ರಹ್ಮರಾಕ್ಷಸ

ಸಾಂವಿಧಾನಿಕ ಸ್ಥಾನಗಳು ಸ್ವಾಯತ್ತೆ ಹೊಂದಿ, ಮುಕ್ತವಾಗಿ ಕಾರ್ಯ ನಿರ್ವಹಿಸುವ ವಾತಾವರಣ ರೂಪುಗೊಂಡರೆ ಮಾತ್ರ ಭ್ರಷ್ಟಾಚಾರ ನಿರ್ಮೂಲನ ಸಾಧ್ಯವಾಗುತ್ತದೆ. ರಾಜಕೀಯ ಪಕ್ಷಗಳಿಗೆ ಈ ಕುರಿತ ಕಾಳಜಿ ಇಲ್ಲ. ಆದ್ದರಿಂದ ಸಮಾಜದಲ್ಲಿ ಭ್ರಷ್ಟಾಚಾರ ನಿರ್ಮೂಲನವಾಗಬೇಕಿದ್ದರೆ ಬಹುವ್ಯಾಪಕವಾದ ಹೋರಾಟ ಅನಿವಾರ್ಯವೇ ಆಗಿದೆ.

ಭ್ರಷ್ಟಾಚಾರ ನಿಗ್ರಹಕ್ಕೆ ಬಲಿಷ್ಠವಾದ ಕಾನೂನು ರೂಪಿಸಬೇಕು ಎಂದು ಅಣ್ಣಾ ಹಜಾರೆ ನೇತೃತ್ವದಲ್ಲಿ ರಾಜಧಾನಿ ದೆಹಲಿಯಲ್ಲಿ ನಡೆದ ಸಾತ್ವಿಕ ಹೋರಾಟ ದೇಶಾದ್ಯಂತ ಎಂತಹ ಸಂಚಲನ ಉಂಟು ಮಾಡಿತೆಂದರೆ, ಕೇಂದ್ರ ಸರ್ಕಾರ ಐದು ದಿನಗಳ ಅವಧಿಯಲ್ಲಿಯೇ ಮಣಿಯಬೇಕಾಯಿತು. ಸಂವಿಧಾನ ತಜ್ಞರು ಒಳಗೊಂಡ ನಾಗರಿಕ ಸಮಾಜದ ಪ್ರತಿನಿಧಿಗಳು ಸರ್ಕಾರದ ಪ್ರತಿನಿಧಿಗಳ ಜೊತೆ ಸೇರಿ ಜನಲೋಕಪಾಲ ಮಸೂದೆಯ ಕರಡನ್ನು ರೂಪಿಸಬಹುದೆಂಬ ಪ್ರಸ್ತಾಪಕ್ಕೆ ಸರ್ಕಾರ ಅಧಿಕೃತ ಮುದ್ರೆಯನ್ನು ಒತ್ತಬೇಕಾಯಿತು. (ಸ್ವತಂತ್ರ ಭಾರತಕ್ಕಾಗಿ ಸಂವಿಧಾನ ರಚಿಸಲು ನೇಮಿಸಲಾಗಿದ್ದ ಸಮಿತಿಯಲ್ಲಿ ಚುನಾಯಿತ ಸದಸ್ಯರಷ್ಟೇ ಇರಲಿಲ್ಲ; ಸಂವಿಧಾನ ರಚನೆಗೆ ಸಂಬಂಧಪಟ್ಟ ಕಾನೂನು ಮತ್ತು ದೇಶದ ಸಾಮಾಜಿಕ ಪರಿಸ್ಥಿತಿಯನ್ನು ಪ್ರತ್ಯಕ್ಷ ತಿಳಿದಿದ್ದ ಕಾನೂನು ತಜ್ಞರೂ ಇದ್ದರು ಎಂಬುದನ್ನು ಈ ಸಂದರ್ಭದಲ್ಲಿ ನೆನಪು ಮಾಡಿಕೊಳ್ಳಬೇಕು. ಈ ಹಿನ್ನೆಲೆಯಲ್ಲಿ ಜನಲೋಕಪಾಲ ಮಸೂದೆಯ ಕರಡನ್ನು ರಚಿಸುವಲ್ಲಿ ನಾಗರಿಕ ವ್ಯಕ್ತಿಗಳನ್ನು ಸೇರಿಸಿಕೊಂಡ ಸಂಗತಿ ಕಾನೂನುವ್ಯಾಪ್ತಿಗೆ ಮೀರಿದ್ದು ಎಂಬ ವಾದವನ್ನು ಒಪ್ಪಬೇಕಾಗಿಲ್ಲ). ಭ್ರಷ್ಟಾಚಾರವೆಂಬ ಪೆಡಂಭೂತ ಎಷ್ಟರಮಟ್ಟಿಗೆ ಭಾರತೀಯ ಸಮಾಜವನ್ನು ವ್ಯಾಪಿಸಿದೆ ಎಂದರೆ ಅಣ್ಣಾ ಹಜಾರೆ ಯಾರು ಎಂಬುದನ್ನು ತಿಳಿಯದ ಸಹಸ್ರಾರು ಮಂದಿ, ಅವರು ಭ್ರಷ್ಟಾಚಾರವನ್ನು ಕೊನೆಗೊಳಿಸಲು ಬಲಿಷ್ಠವಾದ ಕಾನೂನನ್ನು ರೂಪಿಸಲು ಆಮರಣ ಉಪವಾಸ ನಡೆಸುತ್ತಿದ್ದಾರೆ ಎಂಬ ಸುದ್ದಿಯನ್ನು ಕೇಳಿಯೇ ಬೀದಿಗಿಳಿದು ಅಣ್ಣಾ ಅವರ ಒತ್ತಾಯಕ್ಕೆ ಧ್ವನಿ ಸೇರಿಸಿದರು. ಕೇಂದ್ರ ಸರ್ಕಾರಕ್ಕೆ ಜನಾಕ್ರೋಶವನ್ನು ನಿರ್ಲಕ್ಷಿಸುವುದು ಸಾಧ್ಯವಾಗಲಿಲ್ಲ.

ಅದರ ಪರಿಣಾಮ ಉನ್ನತ ಸ್ಥಾನಗಳಲ್ಲಿನ ಭ್ರಷ್ಟಾಚಾರ ತನಿಖೆಗೆ ಬಲಿಷ್ಠ ಲೋಕಪಾಲ ವ್ಯವಸ್ಥೆ ರೂಪಿಸುವ ಕರಡನ್ನು ಸಿದ್ಧಪಡಿಸಲು ಅಧಿಕೃತ ಸಮಿತಿಯೊಂದು ರಚನೆಯಾಗಿದೆ. ಅದಕ್ಕೆ ನಿರ್ದಿಷ್ಟ ಕಾಲಮಿತಿಯನ್ನು ನೀಡಲಾಗಿದೆ. ಬರಲಿರುವ ಮುಂಗಾರು ಅಧಿವೇಶನದಲ್ಲಿಯೇ ಅದನ್ನು ಮಂಡಿಸುವ ಭರವಸೆ ಸರ್ಕಾರದ ಕಡೆಯಿಂದ ಬಂದಿದೆ. ಸ್ವಾತಂತ್ರ್ಯದಿನಕ್ಕೆ ಮೊದಲು ಜನಲೋಕಪಾಲ ಮಸೂದೆಯನ್ನು ಸಂಸತ್ತು ಅಂಗೀಕರಿಸದಿದ್ದರೆ ದೇಶಾದ್ಯಂತ ಜನಾಂದೋಲನ ನಡೆಸುವುದಾಗಿ ಸ್ವತಃ ಅಣ್ಣಾ ಹಜಾರೆ ಎಚ್ಚರಿಕೆ ನೀಡಿದ್ದಾಗಿದೆ. ಎಲ್ಲ ರಾಜಕೀಯ ಪಕ್ಷಗಳೂ ತೋರಿಕೆಗಾಗಿಯಾದರೂ 'ನಾವು ಭ್ರಷ್ಟಾಚಾರದ ವಿರುದ್ಧ ಇದ್ದೇವೆ' ಎಂಬುದನ್ನು ಈಗಾಗಲೇ ಹೇಳಿಕೊಂಡಿವೆ. ಆದರೆ, ಭ್ರಷ್ಟಾಚಾರ ನಿಗ್ರಹ ಪ್ರಶ್ನೆ ಅಷ್ಟು ಸರಳವಾಗಿಲ್ಲ. ಪ್ರಧಾನಿ ಮನಮೋಹನ್ ಸಿಂಗ್ ವ್ಯಕ್ತಿಯಾಗಿ ಶುದ್ಧ ಹಸ್ತರು. ಯುಪಿಎ ಅಧ್ಯಕ್ಷೆಯಾಗಿ ಸೋನಿಯಾ ಗಾಂಧಿ ಭ್ರಷ್ಟಾಚಾರ ಎಸಗುವಂಥ ಅಧಿಕಾರ ಸ್ಥಾನಗಳನ್ನು ವಹಿಸಿಕೊಂಡವರಲ್ಲ. ಭ್ರಷ್ಟಾಚಾರ ದಮನಕ್ಕೆ ಬಲಿಷ್ಠ ಕಾನೂನು ಬಂದರೆ ಅದನ್ನು ಎದುರಿಸುವುದು ಕಷ್ಟ ಎಂಬುದು ಆಡಳಿತಾರೂಢ ಕಾಂಗ್ರೆಸ್ ಸೇರಿದಂತೆ ಎಲ್ಲ ರಾಜಕೀಯ ಪಕ್ಷಗಳ (ಇದರಲ್ಲಿ ಎಡಪಕ್ಷಗಳನ್ನು ಹೊರಗಿಡಬಹುದೇ ಎಂಬುದು ಚರ್ಚೆಯ ಸಂಗತಿ) ಅಂತರಂಗದ ಆತಂಕ. ಇದನ್ನು ನಿವಾರಿಸಿಕೊಳ್ಳಲು ಎಲ್ಲ ರಾಜಕೀಯ ಪಕ್ಷಗಳು ಆರಿಸಿಕೊಂಡ ಮಾರ್ಗ ಜನಲೋಕಪಾಲ ಕಾನೂನು ರಚನಾ ಸಮಿತಿಯಲ್ಲಿರುವ ನಾಗರಿಕ ಪ್ರತಿನಿಧಿಗಳ ತೇಜೋವಧೆ.

ಈ ಹುನ್ನಾರ ಮೊದಲು ಜನಲೋಕಪಾಲ ಮಸೂದೆ ರಚನಾ ಸಮಿತಿಯ ಸಹ ಅಧ್ಯಕ್ಷ ಶಾಂತಿಭೂಷಣ್ ಅವರತ್ತ ತಿರುಗಿತು. ಅವರ ಪುತ್ರ ಪ್ರಶಾಂತ ಭೂಷಣ್ ಸಮಿತಿಯಲ್ಲಿ ಇರುವುದರಿಂದ ಸ್ವಜನ ಪಕ್ಷಪಾತದ ಆರೋಪ ಮಾಡಲಾಯಿತು. 'ಲೋಕಾಯುಕ್ತರಾಗಿ ಕರ್ನಾಟಕದಲ್ಲಿಯೇ ಭ್ರಷ್ಟಾಚಾರವನ್ನು ತಡೆಗಟ್ಟಲಾಗದ ನ್ಯಾಯಮೂರ್ತಿ ಸಂತೋಷ ಹೆಗ್ಡೆ ಜನಲೋಕಪಾಲ ಕರಡು ಸಮಿತಿಯಲ್ಲೇನು ಸಾಧಿಸುತ್ತಾರೆ' ಎಂಬಂತಹ ಕ್ಷುಲ್ಲಕ ಆರೋಪಗಳನ್ನು ಮಾಡಲಾಯಿತು. ರಾಜ್ಯವೊಂದರ ಮುಖ್ಯಮಂತ್ರಿಯಾಗಿದ್ದ ಕಾಂಗ್ರೆಸ್ ಮುಖಂಡ ಈ ಹೇಳಿಕೆ ನೀಡಿದವರು. ಸರ್ಕಾರಕ್ಕೆ ವರದಿ ಸಲ್ಲಿಸುವುದರ ವಿನಾ ಹೆಚ್ಚಿನ ಅಧಿಕಾರ ಕರ್ನಾಟಕ ಲೋಕಾಯುಕ್ತರಿಗಿಲ್ಲ ಎಂಬ ಪ್ರಾಥಮಿಕ ಜ್ಞಾನವೂ ಅವರಿಗಿಲ್ಲ. ಅಣ್ಣಾ ಹಜಾರೆ ಅವರ ನಿಷ್ಕಳಂಕ ವ್ಯಕ್ತಿತ್ವಕ್ಕೆ ಮಸಿ ಬಳಿಯುವಂತಹ ಆರೋಪಗಳೂ ಕೇಳಿಬಂದವು. ಜನಲೋಕಪಾಲ ಮಸೂದೆ ರೂಪಿಸುವ ಸಮಿತಿಯಲ್ಲಿ ಮಹಿಳೆಯರಿಗೆ, ದಲಿತರಿಗೆ ಪ್ರಾತಿನಿಧ್ಯವಿಲ್ಲ ಎಂಬ ಕುಂಟುನೆಪಗಳೂ ಬರುತ್ತಿವೆ. ಇದನ್ನು ನೋಡಿದರೆ ಎಲ್ಲ ರಾಜಕೀಯ ಪಕ್ಷಗಳೂ ಜನಲೋಕಪಾಲ ವ್ಯವಸ್ಥೆ ಅಸ್ತಿತ್ವಕ್ಕೆ ಬರುವುದರ ವಿರುದ್ಧವೇ ಸಂಚು ನಡೆಸುತ್ತಿರುವುದು ಸ್ಪಷ್ಟವಾಗುತ್ತಿದೆ.

ಭ್ರಷ್ಟಾಚಾರ ನಿಗ್ರಹದಲ್ಲಿ ಲೋಕಪಾಲ ವ್ಯವಸ್ಥೆಯೂ ಒಂದು. ಇದನ್ನು ಅಸ್ತಿತ್ವಕ್ಕೆ ತರುವುದರಲ್ಲಿಯೇ ಈ ಮಟ್ಟಿಗೆ ವಿಘ್ನಗಳು ರಾಜಕೀಯ ಪಕ್ಷಗಳಿಂದ ವ್ಯಕ್ತವಾಗುತ್ತಿದೆ. ಚುನಾವಣಾ ಆಯೋಗ, ಸಿಬಿಐ, ಮಹಾಲೇಖಪಾಲರು, ಕೇಂದ್ರ ಜಾಗೃತ ಆಯೋಗ, ಲಂಚನಿರೋಧ ಕಾಯಿದೆಗಳು, ನ್ಯಾಯಾಂಗ, ವಿಧಾನಸಭಾಧ್ಯಕ್ಷರು, ರಾಜ್ಯಪಾಲರು ಮೊದಲಾದ ಸಾಂವಿಧಾನಿಕ ಸ್ಥಾನಗಳು ಸ್ವಾಯತ್ತೆ ಹೊಂದಿ, ಮುಕ್ತವಾಗಿ ಕಾರ್ಯ ನಿರ್ವಹಿಸುವ ವಾತಾವರಣ ರೂಪುಗೊಂಡರೆ ಮಾತ್ರ ಭ್ರಷ್ಟಾಚಾರ ನಿರ್ಮೂಲನ ಸಾಧ್ಯವಾಗುತ್ತದೆ. ರಾಜಕೀಯ ಪಕ್ಷಗಳಿಗೆ ಈ ಕುರಿತ ಕಾಳಜಿ ಇಲ್ಲ. ಆದ್ದರಿಂದ ಸಮಾಜದಲ್ಲಿ ಭ್ರಷ್ಟಾಚಾರ ನಿರ್ಮೂಲನವಾಗಬೇಕಿದ್ದರೆ ಬಹುವ್ಯಾಪಕವಾದ ಹೋರಾಟ ಅನಿವಾರ್ಯವೇ ಆಗಿದೆ. ಅದಕ್ಕೆ ಜನತೆ ಸಜ್ಜಾಗಬೇಕಿದೆ.

■ ಲಕ್ಷ್ಮಣ ಕೊಡಸೆ



